ರಾಜೀವ ತನ್ನ ಲೆಕ್ಕದ ಪುಸ್ತಕವನ್ನು ಬಿಡಿಸಿಟ್ಟ.

"ಕೆಲಸ ಬದಲಾಯಿಸೋದು ತಾನೇ? ಯಾಕೆ ಅದೇ ಕಂಪನಿಯಲ್ಲಿ ಉಳಿದು ಕೊಳೀತಿದೀಯಾ? ಜಾಸ್ತಿ ಸಂಬಳ ಎಲ್ಲಿ ಸಿಗುತ್ತದೋ ಅಲ್ಲಿಗೆ ದಾಟ್ಕೋಬೇಕು."

"ಬದಲಾಯಿಸ್ಬೋದು. ಆದ್ರೆ ಸದ್ಯಕ್ಕೆ ನಮ್ಮ ಕಂಪನೀಲಿ ಅಕೌಂಟೆಂಟ್ ಅಂತ ಇರೋದು ನಾನೊಬ್ನೇ. ಇನ್ನೊಬ್ಬನನ್ನು ತಗೊಂಡು ಅವನು ಸ್ವಲ್ಪ ತಯಾರಾಗೋದ್ರೊಳಗೇ ನಾನೂ ಬಿಟ್ಟುಬಿಟ್ರೆ ಕಂಪನಿಗೆ ತುಂಬಾ ತೊಂದರೆಯಾಗುತ್ತೆ. ಕಷ್ಟದಲ್ಲಿದ್ದಾಗ ಕೆಲಸ ಕೊಟ್ಟ ಕಂಪನಿ. ಅವರ ಬಗ್ಗೇನೂ ಸ್ವಲ್ಪ ಯೋಚಿಸಬೇಕಲ್ವಾ..."

"ಹಾಹಾಹಾ..."

ರಾಜೀವನ ಮಾತಿಗೆ ವೇಣು ನಕ್ಕುಬಿಟ್ಟ.

"ನೋಡು ಗುರೂ, ಈ ಥರದ ಸೆಂಟಿಮೆಂಟುಗಳೆಲ್ಲ ವೈಯಕ್ತಿಕ ಜೀವನದಲ್ಲಿರಬೇಕು, ವೃತ್ತಿ ಬದುಕಿನಲ್ಲ ಲ್ಲ. ಈ ಐಟಿ, ಕಾರ್ಪೊರೇಟ್ ಜಗತ್ತಿನಲ್ಲಿ ಭಾವನೆಗಳೆಲ್ಲಾ ಚಲಾವಣೆಯಾಗುವುದಿಲ್ಲ. ಇಲ್ಲಿ ಮನುಷ್ಯ ತನ್ನ ಅಗತ್ಯಕ್ಕೆ ತಕ್ಕಂತೆ ಬದಲಾಗುತ್ತಾನೆ ಹಾಗೂ ಅದನ್ನು 'ಪರಿಸ್ಥಿತಿ' ಎನ್ನುತ್ತಾನೆ. ನೀನೂ ಹಾಗೇ ಇದ್ದರೆ ಮಾತ್ರ ಇಲ್ಲಿ ಉದ್ಧಾರ ಆಗ್ತೀಯ. ನೀನು ಒಂದೊಂದಾಗಿ ಅಷ್ಟೆಲ್ಲಾ ಮಾಡುವಷ್ಟರಲ್ಲಿ ನಿನ್ನ ವಯಸ್ಸು ಮಠ ಸೇರಿಕೊಂಡಿರತ್ತೆ. ಏನನ್ನೇ ಆದ್ರೂ ಪ್ಲಾನ್ ಮಾಡಿಯೇ ಮಾಡ್ಬೇಕು. ನಿನ್ನಂಥದೇ ಯೋಚನೆಗಳಿರೋ, ಕೆಲಸಕ್ಕೆ ಹೋಗ್ತಿರೋ ಸರಳ ಹುಡುಗೀನ ಹುಡುಕಿ ಮದುವೆಯಾಗು. ನಿನ್ನ ಸಂಪಾದನೆಯ ಜೊತೆ ಅವಳ ಸಂಬಳವೂ ಸೇರಿದ್ರೆ ಈ ಎಲ್ಲ ಲೆಕ್ಕಾಚಾರಗಳೂ ಸುಲಭವಾಗುತ್ತವೆ."

ತನ್ನಂಥವೇ ಕನಸುಗಳಿರುವ ಸರಳ ಹುಡುಗಿ...

ಯಾಕೋ ಮಂಗಳಾ ಅಪ್ರಯತ್ನವಾಗಿ ನೆನಪಾದಳು.

ಬದುಕಿನ ಆಯವ್ಯಯದ ಕಡತದಲ್ಲಿ ಹೂಡಿಕೆಯ ಹೊಸ ಪುಟವೊಂದು ತೆರೆದುಕೊಂಡಂತಾಗಿ ರಾಜೀವನ ಕಣ್ಣು ಹೊಳೆಯತೊಡಗಿತು.

★★★

"ಮತ್ತೆ... ಯಾವಾಗ ಮದುವೆ?"

ಆ ಪ್ರಶ್ನೆಯನ್ನು ಸುಮ್ಮನೆ ಫೋನಿನಲ್ಲಿನ ಸಂಭಾಷಣೆಯನ್ನು ಮುಂದುವರಿಸಲೆಂಬಂತೆ ಕೇಳಿದನಾದರೂ ಕೇಳಿದ ನಂತರ ಇದಕ್ಕೆ ಅವಳು ಕೊಡುವ ಉತ್ತರ ತನ್ನ ಇಡೀ ಜೀವಮಾನವನ್ನೇ ನಿರ್ಧರಿಸಲಿದೆಯೇನೋ ಅನ್ನಿಸಿತು ರಾಜೀವನಿಗೆ.

"ಏನೋ ಗೊತ್ತಿಲ್ಲಾರೀ. ಮನೆಯಲ್ಲಿ ಹುಡುಗನನ್ನು ನೋಡ್ತಿದಾರೆ. ಯಾವಾಗ ಸೆಟ್ಟಾಗತ್ತೋ ಏನೋ..."

ಮಂಗಳಾಳ ಧ್ವನಿಯಲ್ಲಿ ಚಿಂತೆಯ ಪಸೆಯಿತ್ತು.

"ಓಹೋ. ಯಾವ್ದಾದ್ರೂ ಸಂಬಂಧ ಬಂದಿದ್ಯಾ?"

ಮನಸ್ಸಿನಲ್ಲಿ ಭುಗಿಲೆದ್ದ ಆತಂಕ ಮಾತಿನಲ್ಲಿ ಸ್ಫುರಿಸದಂತೆ ಕಷ್ಟಪಟ್ಟು ತಡೆಹಿಡಿಯುತ್ತಾ ಕೇಳಿದ ರಾಜೀವ.

"ಒಂದೆರಡು ಬಂದುಹೋಗಿವೆ. ಇನ್ನೊಂದು ಬರುವುದಿದೆ."

ದೀರ್ಘವಾದ ನಿಟ್ಟುಸಿರಿನೊಂದಿಗೆ ಮಾತನ್ನು ಅರ್ಧಕ್ಕೇ ನಿಲ್ಲಿಸಿದಳು.

"ಯಾಕ್ರೀ? ನಿಮಗಿಷ್ಟವಾಗಿಲ್ವಾ ಆ ಸಂಬಂಧಗಳು?"

"ತಲೆ ಚಿಟ್ಟುಹಿಡಿದು ಹೋಗಿದೆ ರಾಜೀವ್. ಎಂಜಿನಿಯರ್ರು, ಡಾಕ್ಟ್ರು. ಅಷ್ಟು ಸಂಬಳ, ಇಷ್ಟು